ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 ದಿನಾಂಕ : 28–10–2020

# ಪತ್ರಿಕಾ ಪ್ರಕಟಣೆ

## ವಿಜಯದಶಮಿ ದಿನ ಮೃಗಾಲಯದಲ್ಲಿ ರೂ.7.33 ಲಕ್ಷ ಆದಾಯ ಸಂಗ್ರಹ

ಬೆಂಗಳೂರು, ಅಕ್ಟೋಬರ್ 28 (ಕರ್ನಾಟಕ ವಾರ್ತೆ): ಮೈಸೂರು ಮೃಗಾಲಯಕ್ಕೆ ಅಕ್ಟೋಬರ್ 26 ರ ವಿಜಯದಶಮಿ ದಿನದಂದು 7,264 ವೀಕ್ಷಕರು ಭೇಟಿ ನೀಡಿದ್ದು, ರೂ.7.33 ಲಕ್ಷ ಆದಾಯ ಸಂಗ್ರವಾಗಿದೆ. ಕಳೆದ ವರ್ಷ 28,386 ವೀಕ್ಷಕರು ಭೇಟಿ ನೀಡಿ 28.28 ಲಕ್ಷ ಆದಾಯ ಸಂಗ್ರಹವಾಗಿತ್ತು ಎಂದು ಶ್ರೀ ಚಾಮರಾಜೇಂದ್ರ ಮೃಗಾಲಯದ ಉಪಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕಾರ್ಯ ನಿರ್ವಾಹಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಕ್ಟೋಬರ್ 31 ರಂದು ಸೈಕಲ್ ಜಾಥ

ಬೆಂಗಳೂರು, ಅಕ್ಟೋಬರ್ 28 (ಕರ್ನಾಟಕ ವಾರ್ತೆ): ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಹಾಗೂ ಕರ್ನಾಟಕ ರಾಜ್ಯ ಪೊಲೀಸ್ ಕ್ರೀಡಾಭಿವೃದ್ಧಿ ಮಂಡಲಿ ಇವರ ಸಂಯಯಕ್ತ ಆಶ್ರಯದಲ್ಲಿ "ರಾಷ್ಟ್ರೀಯ ಐಕ್ಯತಾ ದಿನಾಚರಣೆ" ಅಂಗವಾಗಿ ಸದೃಢ ಹಾಗೂ ಆರೋಗ್ಯಕರ ಬೆಂಗಳೂರಿಗಾಗಿ ಸೈಕಲ್ ಜಾಥಾವನ್ನು ಅಕ್ಟೋಬರ್ 31 ರಂದು ಬೆಳಿಗ್ಗೆ 7 ಗಂಟೆಗೆ ವಿಧನಸೌಧದ ಮೆಟ್ಟಲುಗಳ ಮುಂಭಾಗ ಹಮ್ಮಿಕೊಳ್ಳಲಾಗಿದೆ.

ಗೃಹಸಚಿವ ಬಸವರಾಜ ಬೊಮ್ಮಾಯಿ ಅವರು ಸೈಕಲ್ ಜಾಥಾಕ್ಕೆ ಚಾಲನೆ ನೀಡುವರು. ಒಳಾಡಳಿತ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಡಾ. ರಜನೀಶ್ ಗೋಯಲ್, ಪೊಲೀಸ್ ಮಹಾ ನಿರ್ದೇಶಕರು ಮತ್ತು ಮಹಾ ನಿರೀಕ್ಷಕ ಪ್ರವೀಣ್ ಸೂದ್ ಉಪಸ್ಥಿತರಿರುವರು.

ಜಾಥಾವು ವಿಧಾನಸೌಧದ ಮುಂಭಾಗದಿಂದ ಪ್ರಾರಂಭವಾಗಿ ಕೆ.ಆರ್.ಸರ್ಕಲ್, ಕಬ್ಬನ್ ಪಾರ್ಕ್, ವಿಠ್ಠಲ್ ಮಲ್ಯ ರಸ್ತೆ ಮುಖಾಂತರ ಟ್ರಿನಿಟಿ ಸರ್ಕಲ್, ದೊಮ್ಮಲೂರು ಜಂಕ್ಷನ್‌ನಿಂದ ಮರಳಿ ಅದೇ ಮಾರ್ಗದಿಂದ ಒಟ್ಟು 16.5 ಕಿ.ಮೀ. ಕ್ರಮಿಸಿ ವಿಧಾನಸೌಧಕ್ಕೆ ವಾಪಸ್ಸು ಬಂದು ಮುಕ್ತಾಯವಾಗುವುದು.

## ಮುಖ್ಯ ಪರೀಕ್ಷೆಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿ ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟ

ಬೆಂಗಳೂರು, ಅಕ್ಟೋಬರ್ 28 (ಕರ್ನಾಟಕ ವಾರ್ತೆ): ಕರ್ನಾಟಕ ಲೋಕಸೇವಾ ಆಯೋಗವು 2020ರ ಆಗಸ್ಟ್ 24 ರಂದು ನಡೆಸಿದ 2017–18ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ ನೇಮಕಾತಿಯ ಉಳಿಕೆ ಮೂಲ ವೃಂದ 94+ಹೈದ್ರಾಬಾದ್–ಕರ್ನಾಟಕ–12, ಒಟ್ಟು 106 ಹುದ್ದೆಗಳ ಪೂರ್ವಭಾವಿ ಪರೀಕ್ಷೆಯಿಂದ ಮುಖ್ಯ ಪರೀಕ್ಷೆಗೆ 1:20 ಅನುಪಾತದಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳ ನೋಂದಣಿ ಸಂಖ್ಯೆಗಳ ಪಟ್ಟಿಯನ್ನು ಆಯೋಗದ ವೆಬ್‌ಸೈಟ್ **http://kpsc.kar.nic.in/list/eligibility** ನಲ್ಲಿ ಹಾಗೂ ಕಟ್‌ಆಫ್ ಅಂಕಗಳನ್ನು **http://kpsc.kar.nic.in/cutoff** ನಲ್ಲಿ ಮಾಹಿತಿಗಾಗಿ ಪ್ರಕಟಿಸಲಾಗಿದೆ.

ಮುಖ್ಯ ಪರೀಕ್ಷೆಗೆ ಅರ್ಹರಾದ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ದಿನಾಂಕದ ಕುರಿತು ಶೀಘ್ರದಲ್ಲಿಯೇ ತಿಳಿಸಲಾಗುವುದು ಎಂದು ಆಯೋಗದ ಪ್ರಕಟಣೆ ತಿಳಿಸಿದೆ.

## ಕೃತಿಗಳ ಆಹ್ವಾನ

ಬೆಂಗಳೂರು, ಅಕ್ಟೋಬರ್ 28 (ಕರ್ನಾಟಕ ವಾರ್ತೆ): ಕರ್ನಾಟಕ ಸಾಹಿತ್ಯ ಅಕಾಡೆಮಿಯು ‘ ಮುಕ್ತ ಪ್ರಕಟಣಾ ಮಾಲೆ’ ಹೆಸರಿನಲ್ಲಿ ಅಪ್ರಕಟಿತ ಕೃತಿಗಳನ್ನು ಪ್ರಕಟಣೆಗಾಗಿ ಆಹ್ವಾನಿಸಲಾಗಿದೆ.

ಆಸಕ್ತ ಲೇಖಕರು ಸಂಶೋಧನೆ, ವಿಮರ್ಶೆ, ಜೀವನಚರಿರೆ, ಆತ್ಮಕತೆ, ನಿಘಂಟು, ಈವರೆಗೆ ಬಾರದೇ ಇರುವ ಜ್ಞಾನಶಾಖೆಯ ಬಗ್ಗೆ ಪ್ರಕಟವಾಗಬಹುದಾದ ಜ್ಞಾನನಿಧಿ ಎನಿಸಬಹುದಾದ ಶಾಸ್ತ್ರಜ್ಞಾನ ಹೆಚ್ಚಿಸುವ 100 ಪುಟಗಳಿಂದ 300 ಪುಟಗಳವರೆಗಿನ ವಿಶೇಷ ಕೃತಿಗಳು ಪ್ರಕಟಣೆಗೆ ಸಿದ್ಧವಿದ್ದಲ್ಲಿ ಅಂತಹ ಕೃತಿಗಳನ್ನು ಸಲ್ಲಿಸಬಹುದು.

ಆಸಕ್ತರು ಕರ್ನಾಟಕ ಸಾಹಿತ್ಯ ಅಕಾಡಿಮಿಯ ವೆಬ್‌ಸೈಟ್ **http://karnatakasahithyaacademy.org** ನಿಂದ ಹೆಚ್ಚಿನ ವಿವರಗಳನ್ನು ಪಡೆದುಕೊಳ್ಳಬಹುದಾಗಿದೆ.

## ಅನಧಿಕೃತ ಸಂಪರ್ಕವನ್ನು ಅಧಿಕೃತಗೊಳಸದಿದ್ದರೆ ಜಲಮಂಡಳಿಯಿಂದ ಕ್ರಮ

ಬೆಂಗಳೂರು, ಅಕ್ಟೋಬರ್ 28 (ಕರ್ನಾಟಕ ವಾರ್ತೆ):

ಜಲಮಂಡಳಿಯಿಂದ ಇತ್ತೀಚೆಗೆ ಅನಧಿಕೃತ ನೀರು ಮತ್ತು ಒಳಚರಂಡಿ ಸಂಪರ್ಕಗಳ ತಪಾಸಣೆ ನಡೆಸಲಾಗಿ ಹಲವಾರು ಕಟ್ಟಡಗಳಿಗೆ ಅನಧಿಕೃತವಾಗಿ ನೀರು ಮತ್ತು ಒಳಚರಂಡಿ ಸಂಪರ್ಕವನ್ನು ಅದರಲ್ಲೂ ಒಳಚರಂಡಿ ಸಂಪರ್ಕವನ್ನು ತೆಗೆದುಕೊಂಡಿರುವುದು ಗಮನಕ್ಕೆ ಬಂದಿದ್ದು, ಅಂತಹ ಸಂಪರ್ಕಗಳನ್ನು ಕಡಿತಗೊಳಿಸಲಾಗಿರುತ್ತದೆ. ಕಡಿತಗೊಳಿಸಲಾದ ಅನಧಿಕೃತ ಸಂಪರ್ಕಗಳನ್ನು ಅಧಿಕೃತಗೊಳಿಸಿಕೊಳ್ಳಲು ಹಲವು ಕಟ್ಟಡಗಳ ಮಾಲೀಕರು ಮಂಡಳಿಗೆ ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿರುವುದಿಲ್ಲ.

ಅನಧಿಕೃತವಾಗಿ ತೆಗೆದುಕೊಂಡಿರುವ ಸಂಪರ್ಕಗಳನ್ನು ಅಧಿಕೃತಗೊಳಿಸಿಕೊಳ್ಳಲು ಕೂಡಲೇ ಆನ್‌ಲೈನ್ ಮುಖಾಂತರ ಅರ್ಜಿಯನ್ನು ಸಲ್ಲಿಸಿದ್ದಲ್ಲಿ, ದಮಾಷ (Prorata) ಶುಲ್ಕ ಬರುವ ಕಟ್ಟಡಗಳನ್ನು ಹೊರತುಪಡಿಸಿ ಇತರೆ ಕಟ್ಟಡಗಳಿಗೆ ದಂಡ ವಿಧಿಸದೆ ಮಂಡಳಿಯಿಂದ ತತ್‌ಕ್ಷಣವಾಗಿ ಸಂಪರ್ಕವನ್ನು ಮಂಜೂರು ಮಾಡಲಾಗುವುದು. ಈಗಾಗಲೇ ಒಳಚರಂಡಿ ಸಂಪರ್ಕವನ್ನು ಕಡಿತಗೊಳಿಸಿರುವ ಇಂತಹ ಕಟ್ಟಡದ ಮಾಲೀಕರು ಈಗಲೂ ಸಹ ದಿನಾಂಕ:೩೦.೧೧.೨೦೨೦ ರೊಳಗಾಗಿ ಅಧಿಕೃತಗೊಳಿಸಿಕೊಳ್ಳದಿದ್ದಲ್ಲಿ ಮಂಡಳಿಯ ನಿಯಮಾನುಸಾರ ದಂಡ ವಿಧಿಸುವುದಲ್ಲದೆ ಬಿ.ಎಂ.ಟಿ.ಎಫ್.ಗೂ ಸಹ ದೂರನ್ನು ಸಲ್ಲಿಸಲಾಗುವುದೆಂದು ಈ ಮೂಲಕ ತಿಳಿಸಿದೆ.

BWSSB warns customers to regularize water connections.

Bangalore, October 28 (Karnataka Information) : BWSSB has recently inspected and found the unauthorized water and sewer connections in the areas and especially the sewer line, which had been cut off. However, many building owners have not applied through online to regularize the unauthorized connections that have been cut so far.

If the application is submitted through online to regularize the connections, the connection will be immediately sanctioned by the board without leving any penalty excluding for the buildings for which prorata charges applicable, the owners of such buildings, for which the sewer line have already been cut off, will be liable to be fined according to the BWSSB Act. Further the complaint will be lodged at BMTF, if not regularized the connections by 30.11.2020 says official Press Release.

## ಮಕ್ಕಳ ರಕ್ಷಣಾ ನಿರ್ದೇಶನಾಲಯ ವತಿಯಿಂದ ಆನ್ ಲೈನ್ ಸ್ಪರ್ಧೆ

**ಬೆಂಗಳೂರು, ಅಕ್ಟೋಬರ್ 28 (ಕರ್ನಾಟಕ ವಾರ್ತೆ) :**

**ಮಕ್ಕಳ ರಕ್ಷಣಾ ನಿರ್ದೇಶನಾಲಯ ಮಾಹಿತಿ, ಶಿಕ್ಷಣ ಮತ್ತು ಸಂವಹನ ಅಡಿಯಲ್ಲಿ 2020ನೆ ವರ್ಷದ ಮಕ್ಕಳ ದಿನಾಚರಣೆ ಅಂಗವಾಗಿ 14 ರಿಂದ 18 ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಮಕ್ಕಳ ಸಾಗಾಣಿಕೆ, ಮಕ್ಕಳ ಭಿಕ್ಷಾಟಣೆ ವಿರುದ್ಧ, ಜಾಲತಾಣ ಸುರಕ್ಷತೆ ಕುರಿತು ಅರಿವು ಮೂಡಿಸುವ ಸಲುವಾಗಿ ವಿವಿಧ ಆನ್‍ಲೈನ್ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ತಾವು ಸದ್ಧಪಡಿಸಿದ ಪ್ರಬಂಧ, ಚಿತ್ರಕಲೆ, ಪೋಸ್ಟರ್, ಪದ್ಯಗಳ ಸಾಫ್ಟ್ ಪ್ರತಿಯನ್ನು dcp.childrenday2020@gmail.com ಇ-ಮೇಲ್ ವಿಳಾಸಕ್ಕೆ ದಿನಾಂಕ 04-11-2020 ಸಂಜೆ 5-30ರ ಒಳಗಾಗಿ ಸಲ್ಲಿಸುವುದು.**

**ಸ್ಪರ್ಧೆಯನ್ನು ರಾಜ್ಯ ಮಟ್ಟದಲ್ಲಿ ಆಯೋಜಿಸಲು ಹಾಗೂ ವಿಜೇತರಾದ ಮಕ್ಕಳಿಗೆ ಬಹುಮಾನ ಮತ್ತು ಪಶಸ್ತಿ ಪತ್ರ ವಿತರಿಸಲು ಯೋಜಿಸಲಾಗಿದೆ ಸದರಿ ಕಾರ್ಯಕ್ರಮದ ಹೆಚ್ಚಿನ ಮಾಹಿತಿಗಾಗಿ icps.karnataka.gov.in ವೆಬ್‍ಸೈಟ್‍ನ ಇತ್ತೀಚಿನ ಸುದ್ಧಿಗಳಲ್ಲಿ ವೀಕ್ಷಿಸಬೇಕೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

## ನೇಮಕ

**ಬೆಂಗಳೂರು, ಅಕ್ಟೋಬರ್ 28 (ಕರ್ನಾಟಕ ವಾರ್ತೆ) :**

**ಪ್ರೊ. ಚಂದ್ರಕಾಂತ್ ಎಂ ಯತ್ನೂರ್, ಪ್ರಾಧ್ಯಾಪಕರು, ರಾಜಕೀಯ ವಿಜ್ಞಾನ ವಿಭಾಗ, ಕಲಬುರಗಿ ವಿಶ್ವವಿದ್ಯಾಲಯ ಇವರನ್ನು 31-10-2020 ರಿಂದ 31-12-2020 ರವರೆಗೆ ವಿಶ್ವವಿದ್ಯಾಲಯದ ಪ್ರಭಾರ ಉಪಕುಲಪತಿಗಳಾಗಿ ನೇಮಕ ಮಾಡಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

## ಸಂವಹನ ಕಾರ್ಯಕ್ರಮ

**ಬೆಂಗಳೂರು, ಅಕ್ಟೋಬರ್ 28 (ಕರ್ನಾಟಕ ವಾರ್ತೆ) :**

**ನಿವೃತ್ತ ಐಪಿಎಸ್ ಅಧಿಕಾರಿಗಳು ಹಾಗೂ ಕೇಂದ್ರ ಗೃಹ ಮಂತ್ರಾಲಯ ನವದೆಹಲಿಯ ಸಲಹೆಗಾರರಾದ ಕೆ. ವಿಜಯ ಕುಮಾರ್ ಅವರು 31-10-2020ರ ಶನಿವಾರ ಸಂಜೆ 4-00 ರಿಂದ 5 ಗಂಟೆಯವರೆಗೆ ದೇಶದ ಎಲ್ಲಾ ಪೋಲೀಸ್ ಸಹೋದರರೊಂದಿಗೆ ಯೂಟ್ಯೂಬ್ ಹಾಗೂ**

ಫೇಸ್ ಬುಕ್‌ನಲ್ಲಿ ನೇರಪ್ರಸಾರದ ಮುಖಾಂತರ ಸಂವಹನ ನಡೆಸಲಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಡಿಪ್ಲೋಮ ಪರೀಕ್ಷೆಗಳ ಫಲಿತಾಂಶ

**ಬೆಂಗಳೂರು, ಅಕ್ಟೋಬರ್ 28 (ಕರ್ನಾಟಕ ವಾರ್ತೆ) :**

**ತಾಂತ್ರಿಕ ಪರೀಕ್ಷಾ ಮಂಡಳಿ 2020ರ ಸೆಪ್ಟಂಬರ್ ತಿಂಗಳಿನಲ್ಲಿ ನಡೆಸಿದ ಡಿಪ್ಲೋಮ ಪರೀಕ್ಷೆಗಳ ಫಲಿತಾಂಶವನ್ನು 29ನೇ ಅಕ್ಟೋಬರ್ 2020ರ ಗುರುವಾರ ಅಪರಾಹ್ನ 3–00 ಗಂಟೆಗೆ ರಾಜ್ಯದಲ್ಲಿನ ಎಲ್ಲಾ ಪಾಲಿಟೆಕ್ನಿಕ್‌ಗಳಲ್ಲಿ ಪ್ರಕಟಿಸಲಾಗುವುದು. ಪರೀಕ್ಷಾ ಫಲಿತಾಂಶವು www.bteresults.net ವೆಬ್ ಸೈಟ್ ನಲ್ಲಿ ಸಹ ಲಭ್ಯವಾಗುತ್ತದೆ.**